**ಸಾಕ್ಷಿಯನ್ನು ದಿನಾಂಕಃ14.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್ ಎಂ ವಕೀಲರಿಂದಃ**

1. 1 ನೇ ಪ್ರತಿವಾದಿಯ ಮಕ್ಕಳಾದ ನಾವೆಲ್ಲಾ ಚಿಕ್ಕಅರಸಿನಕೆರೆಯಲ್ಲಿ ವಾಸ ಇದ್ದೇವೆ ಎಂದರೆ ಸರಿಯಲ್ಲ. ನಾವು ಗುರುದೇವರಹಳ್ಳಿಯಲ್ಲಿ ವಾಸ ಇದ್ದೇವೆ. 1 ಮತ್ತು 2 ನೇ ಪ್ರತಿವಾದಿ ಬನ್ನಹಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಗುರುದೇವರಹಳ್ಳಿ ಮತ್ತು ಬನ್ನಹಳ್ಳಿಗೆ 15 ರಿಂದ 20 ಕಿ ಮೀ ದೂರ ಎಂದರೆ 7 ರಿಂದ 8 ಕಿ ಮೀ ಆಗುತ್ತದೆ. 2 ನೇ ಪ್ರತಿವಾದಿ ನಮ್ಮ ತಂದೆಯ ಎರಡನೇ ಹೆಂಡತಿಯ ಮಗಳು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆ ಯಾರು ಎಂದರೆ ಕುಳ್ಳದೇವೇಗೌಡ ಎಂದು ಹೇಳಿಕೊಳ್ಳುತ್ತಿದ್ದಾರೆ. ನಮ್ಮ ತಂದೆಯ 2 ನೇ ಹೆಂಡತಿಯ ಹೆಸರು ನನಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ನಾನು ತಿಳಿದುಕೊಂಡಿದ್ದೇನೆ. ಲಿಖಿತ ಹೇಳಿಕೆಯಲ್ಲಿ 1 ನೇ ಪ್ರತಿವಾದಿ ತನ್ನ 2 ನೇ ಹೆಂಡತಿಯ ಹೆಸರು ಸಾಕಮ್ಮ ಎಂದು ಹೇಳಿದ್ದಾರೆ. ಲಿಖಿತ ಹೇಳಿಕೆ ಸಲ್ಲಿಸಿದ ನಂತರ ನಾವು ಆ ಬಗ್ಗೆ ಪರಿಶೀಲನೆ ಮಾಡಿಲ್ಲ. ಸಾಕ್ಷಿಯು ಮುಂದುವರಿದು ತನ್ನ ತಂದೆ 2 ನೇ ಮದುವೆ ಮಾಡಿಕೊಂಡು ಸಂಸಾರ ಮಾಡುತ್ತಿದ್ದ ವಿಷಯ ತನಗೆ ಗೊತ್ತಿತ್ತು ಎಂದು ನುಡಿದಿರುತ್ತಾರೆ.

2. ನನ್ನ ತಾಯಿ ಈಗ್ಗೆ 35 ವರ್ಷಗಳ ಹಿಂದೆ ನನ್ನ ತಂದೆಯೊಂದಿಗೆ ಸಂಸಾರದಲ್ಲಿ ಹೊಂದಾಣಿಕೆ ಬರದೇ ನನ್ನ ತಂದೆಯ ವಿರುದ್ಧ ಜೀವನಾಂಶಕ್ಕೆ ಪ್ರಕರಣ ದಾಖಲಿಸಿದ್ದರು ಎಂದರೆ ಜೀವನಾಂಶಕ್ಕೆ ಎಂದು ಗೊತ್ತಿಲ್ಲ ಒಟ್ಟಿನಲ್ಲಿ ಕೇಸ್ ಹಾಕಿದ್ದ ವಿಷಯ ಗೊತ್ತು. ಸುಮಾರು 35 ವರ್ಷಗಳಿಂದ ನನ್ನ ತಂದೆ ಮತ್ತು ತಾಯಿ ಒಟ್ಟಿಗೆ ವಾಸ ಇಲ್ಲ ಎಂದರೆ ಸರಿ. ಅವಾಗಿನಿಂದಲೂ ನನ್ನ ತಂದೆ ಬನ್ನಹಳ್ಳಿಯಲ್ಲಿ ವಾಸ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಗುರುದೇವರಹಳ್ಳಿಗೂ ಬರುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ತಾಯಿ ನನ್ನ ತಂದೆಯನ್ನು ತ್ಯಜಿಸಿದ ಮೇಲೆ ಅವರಿಗೆ ವಿಧಿ ಇಲ್ಲದೇ 2 ನೇ ಮದುವೆ ಮಾಡಿಕೊಳ್ಳಬೇಕಾಯಿತು ಎಂದರೆ ಸುಳ್ಳು. ನನ್ನ ತಂದೆ 2 ನೇ ಮದುವೆ ಮಾಡಿಕೊಂಡ ಮೇಲೇ ನನ್ನ ತಾಯಿ ಯಾವುದೇ ಕಾನೂನು ಕ್ರಮ ಜರುಗಿಸಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಹಾಕಿದ್ದ ಕೇಸ್ ನಲ್ಲಿ ಅಂತಿಮವಾಗಿ ಏನು ತೀರ್ಮಾನವಾಯಿತು ಎಂದು ನನಗೆ ಗೊತ್ತಿಲ್ಲ. ನಮ್ಮಗಳ, ನನ್ನ ತಾಯಿ ಮತ್ತು ನನ್ನ ತಂದೆಯ ನಡುವೆ ರಾಜಿಯಾಗಿ ನನ್ನ ತಂದೆಗೆ ಗುರುದೇವರಹಳ್ಳಿಯಲ್ಲಿ ಇದ್ದ ಜಮೀನು ಮತ್ತು ಮನೆಯನ್ನು ನಮಗೆ ಮತ್ತು ನಮ್ಮ ತಾಯಿಗೆ ಬಿಡುವುದು ಎಂದು ತೀರ್ಮಾನ ಆಗಿತ್ತು ಎಂದರೆ ಸುಳ್ಳು. ನಮಗೆ ಬಿಟ್ಟಿದ್ದ ಆಸ್ತಿಗಳಲ್ಲಿನಾವು ಮತ್ತು ನಮ್ಮ ತಂದೆ ಸೇರಿ ಕೆಲವು ನಿವೇಶನಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರಿದು 7 ಗುಂಟೆ ಮಾರಾಟ ಮಾಡಿರುವುದಾಗಿ ನುಡಿದಿರುತ್ತಾರೆ. ಆ ರೀತಿ ಮಾರಾಟ ಮಾಡಿದಾಗ ನಾವು ಹಣವನ್ನು ಪಡೆದುಕೊಂಡಿಲ್ಲ. ನಿವೇಶನ ಮಾರಾಟ ಮಾಡಿದ ಹಣವನ್ನು ನನ್ನ ತಾಯಿ ಮತ್ತು ಅವರ ಮಕ್ಕಳಾದ ನಾವೆಲ್ಲಾ ಇಟ್ಟುಕೊಂಡೆವು ಎಂದರೆ ಸುಳ್ಳು . ಗುರುದೇವರಹಳ್ಳಿಯಲ್ಲಿ ಇರುವ ಆಸ್ತಿಗಳನ್ನು ನನ್ನ ತಾಯಿ ಮತ್ತು ನಾವು ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಗುರುದೇವರಹಳ್ಳಿಯಲ್ಲಿ ಒಟ್ಟು 5 ಆಸ್ತಿ ಇವೆ. ಜಮೀನಿನ ವಿಸ್ತೀರ್ಣ 2 ವರೆ ಎಕರೆ ಇರಬಹುದು. ಒಂದು ಮನೆ ಇದೆ. ಅದರ ಸುತ್ತ 20 ಗುಂಟೆ ನಿವೇಶನ ಇದೆ. ಆ ಆಸ್ತಿಗಳು ನಮ್ಮ ಮತ್ತು ನಮ್ಮ ತಂದೆಯ ನಡುವೆ ಹಂಚಿಕೆಯಾಗಿಲ್ಲ. ಈ ಕೇಸನ್ನು ನಮ್ಮ ತಂದೆಯ ಆಸ್ತಿಯಲ್ಲಿ ನಮಗೆ ಭಾಗ ಬರಬೇಕೆಂದು ಹಾಕಿದ್ದೇವೆ. ಈ ಕೇಸ್ ನಲ್ಲಿ ಗುರುದೇವರಹಳ್ಳಿಯಲ್ಲಿ ಇರುವ ಜಮೀನು, ಮನೆ ಮತ್ತು ನಿವೇಶನಗಳನ್ನು ಸೇರಿಸಿಲ್ಲ ಎಂದರೆ ಎಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದೇನೆ. ಗುರುದೇವರಹಳ್ಳಿಯಲ್ಲಿ ಇರುವ ಜಮೀನುಗಳಲ್ಲಿ ನಮಗೆ ಭಾಗ ಬೇಕು. ನನ್ನ ತಂದೆ ಗುರುದೇವರಹಳ್ಳಿಯಲ್ಲಿ ಇರುವ ಆಸ್ತಿಗಳನ್ನು ನನ್ನ ತಾಯಿ ಮತ್ತು

ನಮಗೆ ಬಿಟ್ಟುಕೊಟ್ಟಿರುವುದರಿಂದ ಅವುಗಳನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸುಳ್ಳು.

3. ನಾನು ದ್ವಿತೀಯ ಪಿ ಯು ಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಯ ತಂದೆಯ ಹೆಸರು ಮಾದೇಗೌಡ. ಅವರುಮೂಲತಃ ಬನ್ನಹಳ್ಳಿ ಗ್ರಾಮದವರು ಎಂದರೆ ಸರಿಯಲ್ಲ ಅವರು ಗುರುದೇವರಹಳ್ಳಿ ಗ್ರಾಮದವರು. ನಮ್ಮ ಅಜ್ಜಿ ಹೆಸರು ಕಾಡಮ್ಮ. ಅವರು ಬನ್ನಹಳ್ಳಿಯವರು. ನನ್ನ ತಾತನ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿವೆ. ಅವರು ನ್ಯಾಯಾಲಯದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ. ವಿಭಾಗದಲ್ಲಿ ಯಾರು ಯಾರಿಗೆ ಯಾವ ಆಸ್ತಿ ಬಂದಿದೆ ಎಂದು ನಾನು ತಿಳಿದು ಕೊಂಡಿದ್ದೇನೆ,ಈಗ ಹೇಳಲು ಬರುವುದಿಲ್ಲ. ನ್ಯಾಯಾಲಯದಲ್ಲಿ ತೀರ್ಮಾನ ಆದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಅದನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನಮ್ಮ ತಾತ ಮಾದೇಗೌಡರಿಗೆ ಬನ್ನಹಳ್ಳಿ ಗ್ರಾಮದಲ್ಲಿ ಒಂದು ಸ್ವಯಾರ್ಜಿತವಾದ ಸ್ವತ್ತು ಇತ್ತು ಎಂದರೆ ಸರಿ. ಅದರ ಸರ್ವೆ ನಂಬರ್ 8/2 ಅದರ ವಿಸ್ತೀರ್ಣ 2 ಎಕರೆ 2 ಗುಂಟೆ ಎಂದರೆ ಸರಿ. ನನ್ನ ತಾತ ಗುರುದೇವರಹಳ್ಳಿಯ ಬೋರೇಗೌಡರ ದತ್ತು ಮಗ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಬದುಕಿದ್ದ ಸಮಯದಲ್ಲಿ 2 ನೇ ಪ್ರತಿವಾದಿ ಮತ್ತು ಅವರ ತಾಯಿಗೆ ದಿಃ 30.04.2003 ರಲ್ಲಿ ಸದರಿ ಜಮೀನನ್ನು ದಾನ ಮಾಡಿದ್ದಾರೆ ಎಂದರೆ ಸುಳ್ಳು. ಆ ಬಗ್ಗೆ ದಾನ ಪತ್ರ ಮಾಡಿ ನೊಂದಣಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸುತ್ತಿದ್ದು ಅದೇ ಸದರಿ ದಾನ ಪತ್ರ ಎಂದರೆ ಸರಿಯಲ್ಲ. ಆ ಬಗ್ಗೆ ಪ್ರತಿವಾದಿಯರು ತಮ್ಮ ಹೇಳಿಕೆಯಲ್ಲಿ ಬರೆದಿದ್ದಾರೆ ಎಂದರೆ ಸುಳ್ಳು. ಆ ಹೇಳಿಕೆಯನ್ನು ಸಲ್ಲಿಸಿದ ನಂತರ ನಾನು ಆ ಪತ್ರವನ್ನು ಅಲ್ಲಗಳೆದಿಲ್ಲ ಮತ್ತು ಅದರ ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡಿಲ್ಲ ಎಂದರೆ ನಾವು ಪರಿಶೀಲಿಸಿದ್ದು ಆ ಪತ್ರ ಸುಳ್ಳು. ನಾವು ಆ ಬಗ್ಗೆ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಪರಿಶೀಲನೆ ಮಾಡಿದೆನಾ ಎಂದರೆ ಪತ್ರ ನೋಡಲಾಗಿದೆ. ನನ್ನ ತಾತ ಕೊಟ್ಟಂತಹ ದಾನವನ್ನು 2 ನೇ ಪ್ರತಿವಾದಿ ಮತ್ತು ಅವರ ತಾಯಿ ಸ್ವೀಕರಿಸಿ ದಾನ ಕೊಟ್ಟ 2 ಎಕರೆ 2 ಗುಂಟೆ ಜಮೀನಿಗೆ ಹಕ್ಕುದಾರರಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಬಗ್ಗೆ ಆರ್ ಟಿ ಸಿ ಯನ್ನುನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಆ ಆಸ್ತಿ 2 ನೇ

ಪ್ರತಿವಾದಿ ಮತ್ತು ಅವರ ತಾಯಿಯ ಹೆಸರಿನಲ್ಲಿ ಇರುವುದನ್ನು ತಿಳಿದುಕೊಂಡಿದ್ದೇನೆ. ನಮ್ಮ ತಾತ ದಾನ ಪತ್ರ ಬರೆದ ವಿಷಯ 2003 ರಲ್ಲಿ ನಮಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ದಾನ ಪತ್ರದ ಪ್ರಕಾರ 2 ಪ್ರತಿವಾದಿ ಮತ್ತು ಅವರ ತಾಯಿ 2 ಎಕರೆ 2 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಆ ಜಮೀನಿನ ಅವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ಆ ಜಮೀನನ್ನು ನೋಡಿದ್ದೇನೆ. ಅದರ ಚಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ಅದರಲ್ಲಿ ತೆಂಗು ಬೆಳೆ ಕೊಳವೆ ಬಾವಿ ಇದೆ. ನಾವು ಈ ದಾವೆಯನ್ನು ಒಟ್ಟು 9 ಐಟಂ ಆಸ್ತಿಗಳಿಗೆ ಸಲ್ಲಿಸಿದ್ದೇವೆ. ಆರ್ ಟಿ ಸಿ ಮತ್ತು ದಾನ ಪತ್ರ 2 ನೇ ಪ್ರತಿವಾದಿಯ ತಾಯಿಯ ಹೆಸರಿನಲ್ಲಿ ಇದ್ದರೂ ಅವರನ್ನು ಏಕೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಆ ಆಸ್ತಿ ನನ್ನ ತಾತನ ಪಿತ್ರಾರ್ಜಿತ ಆಸ್ತಿ ಆಗಿದ್ದರಿಂದ ಸೇರಿಸಿಲ್ಲ. ನನ್ನ ತಾತ ಮೃತಪಟ್ಟು ಸುಮಾರು 17 ವರ್ಷಗಳಾಗಿವೆ. ನನ್ನ ತಾತ ಬದುಕಿದ್ದಾಗ ಅವರು ದಾನ ಮಾಡಿದ ಆಸ್ತಿಯ ಮೇಲೆ ಯಾವುದೇ ಹಕ್ಕನ್ನು ನಾವು ಕೇಳಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಮ್ಮ ತಾತನ ಬಳಿ ನಾವು ಕೇಳಿದ್ದು ಅದಕ್ಕೆ ನಮ್ಮ ತಾತ ತಾನು ಬದುಕಿರುವ ವರೆಗೂ ತನ್ನ ಬಳಿ ಇರಲಿ , ನಂತರ ಮೊಮ್ಮಕ್ಕಳಾದ ನೀವೆಲ್ಲಾ ಹಂಚಿಕೊಳ್ಳಿ ಎಂದು ಹೇಳಿದ್ದರು. ನಮ್ಮ ತಾತ ಮೃತ ಪಟ್ಟ ತಕ್ಷಣ ಆಸ್ತಿ ಹಂಚಿಕೊಳ್ಳುವ ಪ್ರಯತ್ನ ಮಾಡಲಿಲ್ಲ.

4. ದಾವಾ ಐಟಂ ನಂಬರ್ 3 ರಿಂದ 6 ರ ಆಸ್ತಿಗಳು ನನ್ನ ಅಜ್ಜಿ ಕಾಡಮ್ಮನಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಾತ ಅಣ್ಣ ತಮ್ಮಂದಿರು ಮಧ್ಯವ್ಯಸನಿಗಳಾಗಿ ಜಮೀನನ್ನು ಮಾರಾಟ ಮಾಡಿದಾಗ ನಮ್ಮ ತಾತ ಆ ಜಮೀನುಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡಿದ್ದರು. ಆ ಬಗ್ಗೆ ಕ್ರಯ ಪತ್ರಗಳನ್ನು ನಾನು ನೋಡಿಲ್ಲ. ಅವುಗಳು ನನ್ನ ಅಜ್ಜಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳಿಗೂ ಮತ್ತು ನನ್ನ ತಾತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ಆಸ್ತಿಗಳ ಖಾತೆ ನನ್ನ ಅಜ್ಜಿಯ ಹೆಸರಿಲ್ಲಿ ಇದ್ದವು ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ತಂದೆಯನ್ನು ತ್ಯಜಿಸಿ ಬನ್ನಹಳ್ಳಿಗೆ ಕಳುಹಿಸಿದ್ದರಿಂದ ನನ್ನ ಅಜ್ಜಿ ಸದರಿ ಆಸ್ತಿಗಳನ್ನು ದಿಃ 16.07.2013 ರಂದು ವಿಲ್ ಮುಖಾಂತರ ನನ್ನ ತಂದೆಗೆ ಕೊಟ್ಟರು ಎಂದರೆ ಸರಿಯಲ್ಲ. ನನ್ನ ಅಜ್ಜಿ ಮೃತ ಹೊಂದಿ ಸುಮಾರು 25 ರಿಂದ 30 ವರ್ಷಗಳಾಗಿವೆ. ನನ್ನ ಅಜ್ಜಿ ಮೃತ ಪಟ್ಟು 9 ವರ್ಷಗಳಾಗಿದ್ದು, ನಾನು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮೃತ ಪಟ್ಟ ನಂತರ ವಿಲ್ ಪ್ರಕಾರ ನನ್ನ ತಂದೆ ಆ ಸ್ವತ್ತುಗಳಿಗೆ ಹಕ್ಕುದಾರನಾಗಿದ್ದಾರೆ ಎಂದರೆ ಸರಿ. ಆ ಆಸ್ತಿಗಳನ್ನು ನನ್ನ ತಂದೆ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಆ 4 ಆಸ್ತಿಗಳು ನನ್ನ ತಂದೆಯ

ಹೆಸರಿನಲ್ಲಿ ಇವೆ ಎಂದರೆ ಸರಿ. ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳ ಮೇಲೆ ಭಾಗ ಕೇಳುವ ಹಕ್ಕು ನಮಗೆ ಇಲ್ಲ ಎಂದರೆ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು.

5. ನಮ್ಮ ತಂದೆ ಸಾಕಮ್ಮನನ್ನು ಮದುವೆ ಆದಾಗ ನಾನು ಹೋಗಿದ್ದೆನಾ ಎಂದರೆ ನನ್ನ ತಂದೆ ನನ್ನ ತಾಯಿಗೆ ಗೊತ್ತಿಲ್ಲದಂತೆ 2 ನೇ ಮದುವೆ ಆಗಿರುತ್ತಾರೆ. ಸಾಕಮ್ಮ ಮಳವಳ್ಳಿ ತಾಲ್ಲೂಕಿನ ಕೆಂಬೂತಗೆರೆಯವರು. ನನ್ನ ತಂದೆ ಮತ್ತು ಸಾಕಮ್ಮನವರ ಮದುವೆ ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜರುಗಿದೆ ಎಂದರೆ ಸರಿಯಲ್ಲ. ಆ ಮದುವೆಯನ್ನು ನನ್ನ ತಾತ ಮತ್ತು ನನ್ನ ಅಜ್ಜಿ ಮುಂದೆ ನಿಂತು ಮಾಡಿಸಿದ್ದರು ಎಂದರೆ ಸರಿಯಲ್ಲ . ನಮ್ಮ ತಂದೆ ಸಾಕಮ್ಮನನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ತಂದೆಯ ಧರ್ಮಪತ್ನಿಗೆ ಜನಿಸಿದ ಮಗಳು ಎಂದರೆ ಸರಿಯಲ್ಲ. ನನ್ನ ತಾತ ದಾನ ಪತ್ರ ಬರೆಯುವಾಗ ಅವರ ಮೊಮ್ಮಗಳಿಗೆ ಆಸ್ತಿ ಸೇರಬೇಕೆಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ಅವರ ಸೊಸೆ ಮತ್ತು ಮೊಮ್ಮಗಳಿಗೆ ಕೊಟ್ಟ ಆಸ್ತಿಯನ್ನು ಪಡೆದುಕೊಳ್ಳಬೇಕೆಂದು ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಭಾಗಾಂಶದ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.